

ಬಲವಾದ ಕೇಂದ್ರವನ್ನು ಸ್ಥಾಪಿಸಿಕೊಂಡವು. ಈಗ ಭಾರತದೇಶ ಪ್ರಪಂಚದಲ್ಲಿಯೇ ಪ್ರಬಲವಾದ ರಾಜ್ಯಗಳಲ್ಲಿ ಎರಡನೆಯದು.'

'ಅಂದರೆ ಯುನೈಟೆಡ್ ರಿಪಬ್ಲಿಕ್ಸ್ ಆಫ್ ಇಂಡಿಯಾ ಆಯಿತೆಂದೆ?' ಇನ್ನೂ ನೂರಾರು ಪ್ರಶ್ನೆಗಳನ್ನು ಹಾಕಿದೆವು.

ಆತ ಎಲ್ಲವಕ್ಕೂ ತಾಳ್ಮೆಯಿಂದ ಒಂದೇ ಉತ್ತರ ನೀಡಿದರು, 'ನೀವು ಆಂಧ್ರದೇಶದಲ್ಲಿ ಇಳಿದ ಮೇಲೆ ಅನೇಕ ಪ್ರಶ್ನೆಗಳು ಪರಿಹಾರವಾಗುತ್ತವೆ.'

ಕಾಕಿನಾಡ ರೇವಿನಲ್ಲಿ ಹಡಗಿನಿಂದಿಳಿದೆವು. ಅದು ಕಾಕಿನಾಡ ರೇವು ಎಂದು ಹಡಗಿನವರು ಹೇಳಿದ್ದರಿಂದ ತಿಳಿಯಿತು. ದೊಡ್ಡ ದೊಡ್ಡ ಮಹಲುಗಳನ್ನು, ಕಾರ್ಖಾನೆಗಳನ್ನು, ನವೀನ ವಿಧದಲ್ಲಿ ನಿರ್ಮಿಸಲಾದ ಬಂದರನ್ನು ನೋಡಿದಾಗ ಇದಾ ಕಾಕಿನಾಡ ಎಂದು ಸಂತೋಷದಿಂದ ಪುಳಕಿತರಾದೆವು. ನಾವು ಇಳಿಯುತ್ತಿದ್ದ ಹಾಗೆ ಕಸ್ಟಂಸ್ ವ್ಯವಹಾರ ಮುಗಿಸಿಕೊಂಡು ಊರೊಳಗೆ ಹೋದೆವು. ಹೋಗುತ್ತ ನಮ್ಮ ಹಡಗಿನ ಪರಿಚಿತನನ್ನು ಕೆಲವು ವಿವರಗಳನ್ನು ಕೇಳಿದೆವು. ಆತ ನಮ್ಮ ಆತುರಕ್ಕೆ ನಕ್ಕು, 'ನೀವೇನು ಗಾಬರಿಯಾಗಬೇಡಿ. ನೀವು ಯಾವ ಸಮಾಚಾರ ಬೇಕೆಂದರೂ ಊರಿನಲ್ಲಿ ಸ್ಟೇಟ್ ಇನ್ಫರ್ಮೇಷನ್ ಬ್ಯೂರೋ ನಿಮಗೆ ಸಹಾಯ ಮಾಡುತ್ತದೆ. ಹೋಗಿ' ಅಂದ.

ನಗರದಲ್ಲಿ ಹೆಜ್ಜೆ ಹಾಕಿದಾಗಿನಿಂದ ನಮ್ಮ ಕೆಲಸ ಕೊಂಚ ಹಿಂದುಮುಂದಾದರೂ ಪ್ರತಿಯೊಬ್ಬ ಪೋಲೀಸೂ ನಮಗೆ ಬಹಳ ಸಹಾಯ ಮಾಡಿದರು. ನಾವು ಕೇಳಿದ ಪ್ರತಿಯೊಂದು ವಿವರವನ್ನೂ ಕೊಡುತ್ತ, ಬೇಸರಿಸದೆ ದಾರಿಗಳನ್ನು ತೋರಿಸಿದರು. ನಮ್ಮ ಆಶ್ಚರ್ಯಕ್ಕೆ ಎಲ್ಲೆಯಿರಲಿಲ್ಲ.

ಎಷ್ಟು ಬದಲಾವಣೆ! ಈವರೆಗೆ ಪೋಲೀಸು ಎಂದರೆ 'ದಂಡನೆ' ಎಂದರ್ಥ. ಈಗಲೋ ಜನಸೇವಕ. ಅಷ್ಟೇ ಅಲ್ಲ, ಕಾಕಿನಾಡದ ತುಂಬ ಟ್ರಾಮುಗಳು, ಬಸ್ಸುಗಳು. ರಸ್ತೆಗಳೆಲ್ಲ, ಪ್ರತಿ ಸಂದಿಯನ್ನೂ ಸಿಮೆಂಟಿನಿಂದ ನಿರ್ಮಿಸಿದ್ದರು. ಪ್ರತಿಯೊಂದು ಕಟ್ಟಡವನ್ನೂ ಸಿಮೆಂಟು ಕಾಂಕ್ರೀಟ್, ಉಕ್ಕಿನಿಂದ ಕಟ್ಟಿದ್ದರು. ಹತ್ತು ಅಂತಸ್ತಿನಿಂದ ಐವತ್ತು ಅಂತಸ್ತುಗಳಿಗೆ ಕಟ್ಟಡಗಳೆಲ್ಲ ಬೆಳೆದಿದ್ದವು. ನಾವಿಬ್ಬರು ಗೆಳೆಯರೂ ಓಹೋ ಅಂದುಕೊಂಡೆವು. ಉಪಾಹಾರ ಮುಗಿಸಿದ ನಂತರ ಸ್ಟೇಟ್ ಬಸ್ಸಿನಲ್ಲಿ ಇನ್ಫರ್ಮೇಷನ್ ಬ್ಯೂರೋಗೆ ಹೋದೆವು.

ಅದೊಂದು ಇಪ್ಪತ್ತು ಅಂತಸ್ತುಗಳ ದೊಡ್ಡ ಭವನ. ಸರ್ಕಾರಿ ಕಾರ್ಯಾಲಯಗಳೆಲ್ಲ ಆ ಭವನದಲ್ಲಿಯೇ ಇದ್ದವು. ಈ ಭವನದ ಮೇಲೂ ನಾವು ಹಡಗಿನ ಮೇಲೆ ನೋಡಿದಂತಹ ಬಾವುಟವೊಂದು ಹಾರಾಡುತ್ತಿತ್ತು. ನಮಗಾ ಝುಂಡಾ ಏನೆಂದು ತಿಳಿಯದೆ, ಇನ್ಫರ್ಮೇಷನ್ ಬ್ಯೂರೋ ಅಧಿಕಾರಿಯನ್ನು ಕೇಳಿದೆವು. ಆತ ಸಾವಕಾಶದಿಂದ, ಶಾಂತವಾಗಿ ಮುಗುಳುನಗೆ ನಕ್ಕು, ಹೆಮ್ಮೆಯಿಂದ 'ಅದು ನಮ್ಮ ತೆಲುಗು ಪತಾಕೆ. ನಮ್ಮ ತೆಲುಗು ರಿಪಬ್ಲಿಕ್ ಅನುಮೋದಿಸಿದ ಬಾವುಟ' ಅಂದ.

ನನ್ನ ಮಾತಿಗೆ ನಾನು, ತೆಲುಗುತನದಿಂದ, ನನ್ನ